ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ .....

ಪುಟದ ಸಂಖ್ಯೆ -1-

ಕಡತದ ಸಂಖ್ಯೆ EE/32/AM/108/2021

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(1)	ಈ Be ಕಾಮಗಾರಿಯ ಗುತ್ತಿಗೆದಾರರಾದ ಮೆಸ್ಸರ್ಸ್ ಲಲಿತ್ ಕನ್ಸ್ಟ್ರಕ್ಷನ್ಸ್ (ಮಾಲೀಕರು) ಇವರು ಸದರಿ ಕಾಮಗಾರಿಯ ಬಿಲ್ಲಿನ ಮೊತ್ತವನ್ನು ಪಾವತಿಸಲು ಕೋರಿ ದಿನಾಂಕ 28/11/2020 ರಂದು ಸಲ್ಲಿಸಿರುವ BR no 225/26-10-2018 ಚೆಕ್ಕಿನ ಮೂಲ ಪ್ರತಿಯನ್ನು ಸಲ್ಲಿಸಿರುತ್ತಾರೆ. ಸದರಿ ಚೆಕ್ಕಿನಲ್ಲಿ ಪಾವತಿಸಬೇಕಾದ ಮೊತ್ತವನ್ನು Online ಮುಖಾಂತರ ದಿನಾಂಕ 28/10/2018 ರಂದು ಪಾವತಿಸಲಾಗಿರುತ್ತದೆ. ಆದ್ದರಿಂದ ಸದರಿ ಚೆಕ್ಕಿನ ಮೊತ್ತವನ್ನು ಪಾವತಿಸಲು ಅನುಕೂಲವಾಗುವಂತೆ ದಿನಾಂಕ 13/7/2020 ರಂದು CFO ಅವರಿಂದ ಸ್ವೀಕೃತವಾಗಿರುವ ಸದರಿ ಚೆಕ್ಕನ್ನು ಹಿಂಪಡೆಯಲು ಅನುಕೂಲವಾಗುವಂತೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ. ಸದರಿ ಚೆಕ್ಕಿನ ಮೊತ್ತವನ್ನು ಪಾವತಿಸಲು ಕೋರಿ ಗುತ್ತಿಗೆದಾರರು ಸಲ್ಲಿಸಿರುವ ಚೆಕ್ಕನ್ನು ಸಂಬಂಧಿಸಿದ ಕಡತದಲ್ಲಿ upload ಮಾಡಿ ಕಡತವನ್ನು ಮೇಲಿನಂತೆ ಕ್ರಮವಹಿಸಲು ಕೋರಿದೆ. ಸದರಿ ಚೆಕ್ಕಿನ (ಮಾಲೀಕರು) ಮೂಲ ಪ್ರತಿಯನ್ನು ಕಡತದಲ್ಲಿ ಲಗತ್ತಿಸಿದ್ದು ಕಡತವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ. ದಿನಾಂಕ 28/11/2020
(2)	Allowed Supt)

EXECUTIVE ENGINEER
Bruhat Bengaluru Mahangara Palike,
Dasarahalli Division, Bengaluru-57

ಪು.ತಿ.ನೋ

ಪಾಕ್ಷಯ
ಸಂಖ್ಯೆ

ವಿಷಯ:– ಕಾಮಗಾರಿ ಬಿಲ್ ಪಾವತಿ ಆಗದೇ ಇರುವ ಬಗ್ಗೆ.

ಉಲ್ಲೇಖ:– ವಕೀಲ್ ನೋಟಿಸ್ ದಿನಾಂಕ: 20.07.2020.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗದಿಂದ ಗುತ್ತಿಗೆದಾರರಾದ ಶ್ರೀ. ಶ್ರೀರಾಮರಡ್ಡಿ ರವರು "Improvements to main roads of Byrveshwaranagar in Bagalagunte ward no 14. Job No. 014-18-000004 Est.cost 50.00 Lakhs" ಕಾಮಗಾರಿಯನ್ನು ನಿರ್ವಹಿಸಿದ್ದು, ಕಾಮಗಾರಿ ಪೂರ್ಣಗೊಂಡಿರುವುದಾಗಿ ದೃಢೀಕರಿಸಿ ಸಂಬಂಧಪಟ್ಟ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯನಿರ್ವಹಕ ಅಭಿಯಂತರರು ಬಿಲ್ಲನ್ನು ತಯಾರಿಸಿ ಸಲ್ಲಿಸಿದ ನಂತರ ಬಿಲ್ಲನ್ನು ಆಡಿಟ್ ಮಾಡಿ ದಿನಾಂಕ 26.10.2018 ರಂದು ಎಲ್ಲಾ ದಾಖಲೆಗಳನ್ನು upload ಮಾಡಿ online ನಲ್ಲಿ ಟಿ.ವಿ.ಸಿ.ಸಿ. ರವರಿಗೆ ಸಲ್ಲಿಸಲಾಗಿರುತ್ತದೆ. ದಿನಾಂಕ: 02.11.2018 ರಂದು "Bring hard copy for verification before upload the bill" ಎಂದು ವಿಭಾಗಕ್ಕೆ ಹಿಂತಿರುಗಿಸಿರುತ್ತಾರೆ. ನಂತರ Hard Copy ಯನ್ನು ಟಿ.ವಿ.ಸಿ.ಸಿ. ರವರಿಗೆ ಸಲ್ಲಿಸಿ ಪರಿಶೀಲಿಸಿದ ನಂತರ ದಿನಾಂಕ: 28.02.2019 ರಂದು ವಿಭಾಗದಿಂದ ಟಿ.ವಿ.ಸಿ.ಸಿ. ರವರಿಗೆ ಪುನ: ಸಲ್ಲಿಸಲಾಗಿತ್ತು. ಅಲ್ಲಿಂದ ಮುಖ್ಯ ಲೆಕ್ಕಾಧಿಕಾರಿಗಳಿಗೆ online ಮೂಲಕ ಪಾವತಿಗಾಗಿ ದಿನಾಂಕ: 07.03.2019 ಸಲ್ಲಿಸಲಾಗಿದೆ. ನಂತರ ದಿನಾಂಕ: 13.07.2020 ರಂದು ಕರಾರು ಪತ್ರ ಮತ್ತು ಕಾರ್ಯದೇಶವನ್ನು ಮಾತ್ರ ಅಪ್‌ಲೋಡ್ ಮಾಡಲು ತಿಳಿಸಿ ಮುಖ್ಯಲೆಕ್ಕಾಧಿಕಾರಿಗಳ ಕಛೇರಿಯ ಲೆಕ್ಕಾಧೀಕ್ಷಕರ portal ನಿಂದ online ನಲ್ಲಿ ಹಿಂತಿರುಗಿಸಿರುತ್ತಾರೆ.

ಮುಂದುವರೆದಂತೆ ಕಡತವನ್ನು online ನಲ್ಲಿ ಪರಿಶೀಲಿಸಲಾಗಿ ಸದರಿ ಕಡತದಲ್ಲಿ "Bill copy" ಹೊರತುಪಡಿಸಿ ಉಳಿದ ಎಲ್ಲಾ ದಾಖಲೆಗಳು delete ಆಗಿರುವುದು ಕಂಡು ಬಂದಿರುತ್ತದೆ. ಎಲ್ಲಾ Portal ನಲ್ಲಿ upload ಮಾಡಲಾದ ಎಲ್ಲಾ ಅಗತ್ಯ ದಾಖಲೆಗಳನ್ನು ಮತ್ತು ಮೂಲ ಕಡತವನ್ನು ಟಿ.ವಿ.ಸಿ.ಸಿ ರವರು ಪರಿಶೀಲಿಸಿದ ನಂತರವೇ ಪಾವತಿಗಾಗಿ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸಲ್ಲಿಸುವುದು ಕ್ರಮವಾಗಿರುತ್ತದೆ. ಅಂದರೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯ caocw Portal ಗೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುವುದು ಖಚಿತವಾಗಿರುತ್ತದೆ. ಆದರೆ ಗುತ್ತಿಗೆದಾರರು ಕಛೇರಿಗೆ ಬಂದು ಎಲ್ಲಾ ದಾಖಲೆಗಳನ್ನು ವಿಭಾಗದ ಕಛೇರಿಯಲ್ಲಿ delete ಮಡಿರುವುದಾಗಿ ಆರೋಪ ಮಾಡಿ ವಕೀಲ್ ನೋಟಿಸ್ ನೀಡಿರುತ್ತಾರೆ.

ಮಹಾನಗರ ಪಾಲಿಕೆ

ಪತ್ರಿಗಳು

ಫೈಲ್ ಸಂಖ್ಯೆ

ಕಡತದ ಸಂಖ್ಯೆ

ಮಂಜೂರು ಸಂಖ್ಯೆ

ವಿಷಯ: ಮುಖ್ಯ ಅಭಿಯಂತರರು

- **Work Order level**
  - Job code Sheet
  - AS
  - TS
  - Estimate
  - Shedule B
  - Agreement
  - Work order
- **A. E. level**
  - Before Photo
  - Progress Photo
  - After Photo
  - QR
  - Bill Form
  - Completion Report
  - MB
  - EMD
  - Road History
  - PMC
  - Bank Details and Others

A. E. E Level

- ಕಾಮಗಾರಿ Job ಕಾರ್ಡಿನಂತೆ ಸ್ಥಳದಲ್ಲಿ ಪರಿಶೀಲಿಸಿ ಅಳತೆಗಳನ್ನು ಪರಿಶೀಲಿಸಲಾಗಿ ಅಳತೆ ಪ್ರಮಾಣ 100% Check Measurement ಮಾಡಿ Completion Report ಗೆ ಸಹಿ ಮಾಡಿ ಅಂತಿಮ ಪಾವತಿಗಾಗಿ ಅಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ

E. E Level

- ಕಾಮಗಾರಿ Job ಕಾರ್ಡಿನಂತೆ ಸ್ಥಳದಲ್ಲಿ ಪರಿಶೀಲಿಸಿ 10% Check Measurement ಮಾಡಿ Completion Report ಗೆ ಸಹಿ ಮಾಡಿ ದೃಢೀಕರಿಸಲಾಗಿರುತ್ತದೆ

A. C Level

ಈ ಪತ್ರದಲ್ಲಿ ಮಾಡಿರುವ ಕಾಮಗಾರಿಯನ್ನು ಸೂಚನೆಯಂತೆ ಸ್ಥಳದಲ್ಲಿ ಪರಿಶೀಲಿಸಿ ಸ್ಥಳದಲ್ಲಿ ಅಳತೆ ಮಾಡಿ ಸರಿಯಾಗಿ ಕಂಡು ಬಂದಿದ್ದು ಅಂತಿಮ ಬಿಲ್ಲಿಗೆ ಶಿಫಾರಸ್ಸು ಮಾಡಿ ಸಲ್ಲಿಸಲಾಗಿರುತ್ತದೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಈ ಮೇಲಿನ ಎಲ್ಲಾ ಹಂತದಲ್ಲೂ ಸಂಬಂಧಪಟ್ಟ ಕೆಲಸಗಳನ್ನು ಸರಿಯಾಗಿ ನಿರ್ವಹಿಸದೇ ಇದ್ದರು ಸಹ A.S Level ನಲ್ಲಿ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡಿರುವುದನ್ನು ಖಚಿತ ಪಡಿಸಿಕೊಂಡು ಪರಿಶೀಲಿಸಿ ಮೇಲಿನ ಹಂತದಲ್ಲಿ ಬಿಟ್ಟುಹೋಗಿರುವ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಕಳುಹಿಸಲಾಗಿರುತ್ತದೆ. ಇದನ್ನು ಟಿ.ವಿ.ಸಿ.ಸಿ ರವರು ಮರು ಪರಿಶೀಲಿಸಿ ಪಾವತಿಗಾಗಿ ಮುಖ್ಯಲೆಕ್ಕಾಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತಾರೆ. ಅದರಂತೆ ಸದರಿ ಕಡತವು ಮುಖ್ಯ ಲೆಕ್ಕಾಧಿಕಾರಿಗಳಿಗೆ ಸಲ್ಲಿಸಿರುವುದು ಆನ್‌ಲೈನ್ ಮುಖಾಂತರ ಕಂಡು ಬಂದಿರುತ್ತದೆ.

ದಿನಾಂಕ: 13.07.2020 ರಂದು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಿಂದ ಆನ್‌ಲೈನ್ ಮುಖಾಂತರ ಕಡತವನ್ನು ಹಿಂದಿರುಗಿಸಿ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಲು ತಿಳಿಸಿರುತ್ತಾರೆ. ಆದರೆ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ಕಡತದ ಎಲ್ಲಾ ದಾಖಲೆಗಳನ್ನು ಉದ್ದೇಶ ಪೂರ್ವಕವಾಗಿ ಡಿಲಿಟ್ ಮಾಡಿ ಪಾವತಿಗೆ ಅಡಚಣೆ ಮಾಡಿರುತ್ತಾರೆ ಎಂದು ಉಲ್ಲೇಖ ಪತ್ರದಂತೆ ದಿನಾಂಕ: 20.07.2020 ರಂದು ಸದರಿ ಕಾಮಗಾರಿ ಗುತ್ತಿಗಾದರರಾದ ಶ್ರೀ. ಶ್ರೀರಾಮರೆಡ್ಡಿ ರವರು ಕಾರ್ಯಪಾಲಕ ಅಭಿಯಂತರರಿಗೆ ವಕೀಲ್ ನೋಟಿಸ್ ನೀಡಿರುವುದರಿಂದ ಸದರಿ ಕಡತದ ಬಗ್ಗೆ ಮತ್ತೊಮ್ಮೆ ಪರಿಶೀಲಿಸಲಾಗಿ ಕಡತದಲ್ಲಿ ಕಾಮಗಾರಿ ಆದೇಶ ಪ್ರತಿಗೆ ಶ್ರೀ.ಎಲ್.ಜಯಲಿಂಗಪ್ಪ (ಪ್ರಭಾರ) ಕಾರ್ಯಪಾಲಕ ಅಭಿಯಂತರರು ಸಹಿ ಮಾಡಿರುತ್ತಾರೆ. ಸದರಿಯವರು ದಿನಾಂಕ 14.08.2018 ರಂದು ಕಾರ್ಯಭಾರ ವಹಿಸಿಕೊಂಡು ಅದೇ ದಿನವೇ ಕಾರ್ಯದೇಶಕ್ಕೆ ಸಹಿ ಮಾಡಿರುವುದು ಕಂಡು ಬಂದಿದೆ. ಅಲ್ಲದೆ ರಸ್ತೆ ಇತಿಹಾಸ ಪ್ರಕಾರ ಕಾರ್ಯದೇಶದ ದಿನಾಂಕ: 04.02.2018 ಎಂದು ಇರುತ್ತದೆ. ಆದರೆ ಬಿ.ಆರ್. ನಮೂದಿಸುವಾಗ ಸದರಿ ಕಾಮಗಾರಿಯ ಕಾರ್ಯದೇಶಕ್ಕೆ ಶ್ರೀ.ವೈ.ಎನ್.ಶೇಷದ್ರಿ (ಕಾ.ಪಾ.ಅ) ರವರು ಸಹಿ ಮಾಡಿರುವ ಕಾರ್ಯದೇಶವನ್ನೇ ಆನ್‌ಲೈನ್ ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ಅಲ್ಲದೇ ಬಿಲ್ ಪ್ರತಿಯಂತೆ ಕಾಮಗಾರಿ ದಿನಾಂಕ: 24.05.2018 ರಂದು ಪೂರ್ಣಗೊಂಡಿದ್ದು, ಕಾರ್ಯದೇಶವನ್ನು ದಿನಾಂಕ: 14.08.2018 ನೀಡಿದಂತಾಗಿದೆ. ಅಂದರೆ ಕಾರ್ಯದೇಶ ನೀಡುವ ಮೊದಲೇ ಕಾಮಗಾರಿ ಪೂರ್ಣಗೊಂಡಿರುವುದಾಗಿ ದಾಖಲಾಗಿರುತ್ತದೆ. ಈ ಸಂಬಂಧ ಹಲವು ಅನುಮಾನಗಳಿರುವುದರಿಂದ ವಾರ್ಡ್ ಅಭಿಯಂತರರಿಂದ ವಿವರಣೆ ಪಡೆಯಬಹುದಾಗಿರುತ್ತದೆ.

ಕಡತಕ್ಕೆ ಅಗತ್ಯವಿರುವ ದಾಖಲೆಗಳನ್ನು ಅಪ್‌ಲೋಡ್ ಆಗದೇ ಇದ್ದರೆ ಟಿವಿಸಿಸಿ ರವರಿಂದಲೇ ಹಿಂತಿರುಗಿಸಲಾಗುತ್ತದೆ. ದಾಖಲೆಗಳು ಅಪ್‌ಲೋಡ್ ಆಗದಿರುವುದನ್ನು ಟಿ.ವಿ.ಸಿ.ಸಿ ರವರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ ..... (5)

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಖಚಿತಪಡಿಸದ ನಂತರವೇ ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದರೆ ಮುಖ್ಯಲೆಕ್ಕಾಧಿಕಾರಿಗಳ ಕಛೇರಿಯ ದಾಖಲೆಗಳು ಅಪ್‌ಲೋಡ್ ಆಗಿಲ್ಲ ಎಂದು ಹಿಂತುರುಗಿಸಿರುವುದರಿಂದ ಈ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರ ವಲ್ಲಭ ಸಾಪ್ಟವೇರ್ ರವರ ಸಹಯೋಗದೊಂದಿಗೆ ಡಿಲಿಟ್ ಮಾಡಿರಬಹುದು ಎಂಬ ಸಂಶಯ ಉಂಟಾಗಿರುತ್ತದೆ. ಆದ್ದರಿಂದ ಈ ಬಗ್ಗೆ ವಿವರಣೆ ಕೋರಿ "M/S Vallab software" ರವರಿಗೆ ದಿನಾಂಕ 28-07-2020 ರಂದು Email ಮುಖಾಂತರ ಕೋರಲಾಗಿತ್ತು. (ಸದರಿ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ). ಹಾಗೂ ಸದರಿ ವಿಷಯವಾಗಿ ಮುಖ್ಯ ಲೆಕ್ಕಾಧಿಕಾರಿಗಳಿಗೂ ವರದಿ ಸಲ್ಲಿಸಲಾಗಿದೆ. ಆದರೆ ಈವರೆವಿಗೂ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

ಮುಂದುವರೆದಂತೆ ಜಾಬ್ ಸಂಖ್ಯೆ 014-18-000002 ಕಾಮಗಾರಿಯನ್ನು ಸಹ ಸದರಿ ಗುತ್ತಿಗೆದಾರರು ನಿರ್ವಹಿಸಿದ್ದು ಆನ್‌ಲೈನ್‌ನಲ್ಲಿ ಬಿ.ಆರ್ 224 ದಿನಾಂಕ: 24.10.2018 ರಂದು ಬಿ.ಆರ್ ನಮೂದಿಸಿ ಟಿವಿಸಿಸಿ ರವರಿಗೆ ಕಳುಹಿಸಲಾಗಿತ್ತು, ಕೆಲವು ದಿನಗಳ ನಂತರ ಸದರಿ ಕಡತವು (13) ಆನ್‌ಲೈನ್‌ನಲ್ಲಿ ಕಾರ್ಯದೇಶದ ಹಂತದಿಂದ (Work order Portal, AE Portal, AEE Portal, EE Portal, B.R Portal & TVCC portal) ಎಲ್ಲಾ ದಾಖಲೆಗಳು ಡಿಲಿಟ್ ಆಗಿ No Data Display ಎಂದು ಆಗಿದ್ದು. ಗುತ್ತಿಗೆದಾರರ ಮನವಿ ಮೇರೆಗೆ ಮತ್ತೊಮ್ಮೆ ಆನ್‌ಲೈನ್ ಮುಖಾಂತರ ಕಾರ್ಯದೇಶ ಸೃಷ್ಟಿ ಮಾಡಿ ಮತ್ತೊಮ್ಮೆ ಬಿ.ಆರ್ ಅನ್ನು ಹೊಸದಾಗಿ ನಮೂದಿಸಲಾಯಿತು. ಪದೇ ಪದೇ ಒಂದೇ ಗುತ್ತಿಗೆದಾರರ ಕಾಮಗಾರಿ ಕಡತಗಳು ಆನ್‌ಲೈನ್ ನಲ್ಲಿ ನಾಪತ್ತೆ ಆಗಿರುವುದು ಹಲವು ಅನುಮಾನಗಳಿಗೆ ಎಡಮಾಡಿಕೊಟ್ಟಿದ್ದು ಸದರಿ ಸಾಪ್ಟ್‌ವೇರ್ ಭದ್ರತೆ ಇಲ್ಲದಂತಾಗಿದೆ.

ದಿನಾಂಕ: 24.11.2020 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪಾಲಿಕೆಯ ಕೇಂದ್ರ ಕಛೇರಿಯ ಕಡತಗಳು ಐ.ಎಫ್.ಎಂ.ಎಸ್. ನಲ್ಲಿ ಅಪ್‌ಲೋಡ್ ಆದ ದಾಖಲಾತಿಗಳು ಕಣ್ಮರೆ ಆಗಿರುವ ಬಗ್ಗೆ (14) ಸುದ್ದಿ ಪ್ರಚುರವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಆದ್ದರಿಂದ ಮೇಲಿನ ಎಲ್ಲಾ ವಿಷಯಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸೂಕ್ತ ನಿದೇರ್ಶನ ಕೋರಿ ಕಡತ ಮಂಡಿಸಿದೆ.

Acct. Supdt.
30/11/2020

(15) EE ರವರಿಗೆ As per the M/s Vallabha soft ware report, BR attached was deleted on 26/10/2018, under this DSR. Call Explanation from the then EE, Express & upload all documents in the software from me

30/11/20

(AE) AE(s)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಾಸರಹಳ್ಳಿ ವಲಯ, ಎಂ.ಇ.ಐ. ಬಡಾವಣೆ, ಹೆಸರಘಟ್ಟ ಮುಖ್ಯ ರಸ್ತೆ, ಬಾಗಲಗುಂಟೆ, ಬೆಂಗಳೂರು-73

ಸಂ: ಬಿಬಿಎಂಪಿ/ದಾ.ವಿ/ಪಿ.ಆರ್/ /2020-21

ಕಾರ್ಯಪಾಲಕ ಅಭಿಯಂತರವರ ಕಛೇರಿ,
ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ
ಬೆಂಗಳೂರು, ದಿನಾಂಕ:

ಗೆ,

Jayalingappa B L
No.977, 4th Main,
Havanoor Extention,
Peenya, T.Dasarahalli
Bengaluru- 560073

ವಿಷಯ:- ಕಾಮಗಾರಿಯ ಜಾಬ್ ಸಂ. 014-18-000004 ಗೆ ಸಂಬಂಧಿಸಿದಂತೆ ವಿವರಣೆ ನೀಡುವ ಬಗ್ಗೆ.

ಉಲ್ಲೇಖ:- ವಕೀಲ್ ನೋಟಿಸ್ ದಿನಾಂಕ: 20.07.2020.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರ ದಾಸರಹಳ್ಳಿ ವಿಭಾಗದಿಂದ ಜಾಬ್ ಸಂ. 014-18-000004 Improvements to main road of Byraeshwaranagar in Bagalagunte ward no 14 ಕಾಮಗಾರಿಯನ್ನು ಶ್ರೀ.ರಾಮರೆಡ್ಡಿ ಗುತ್ತಿಗೆದಾರರು ನಿರ್ವಹಿಸಿರುತ್ತಾರೆ.

ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಕಾಮಗಾರಿಯು ದಿನಾಂಕ 24.05.2018 ರಂದು ಪೂರ್ಣಗೊಂಡಿರುವುದಾಗಿ ಬಿಲ್ ಪ್ರತಿಯಲ್ಲಿ ನಮೂದಿಸಿದ್ದು, ಕಾರ್ಯದೇಶವನ್ನು ದಿನಾಂಕ: 14/08/2018 ರಂದು ತಾವು ನೀಡಿರುತ್ತೀರಿ ಎಂದು ದಾಖಲಾಗಿರುತ್ತದೆ. ಸದರಿ ಬಿಲ್‌ಗೆ ಆನ್‌ಲೈನ್ ಮುಖಾಂತರ ದಿನಾಂಕ: 26/10/2018 ರಂದು ಬಿ.ಆರ್ ನಮೂದಿಸಲಾಗಿದೆ.

ಆನ್‌ಲೈನ್ ಮುಖಾಂತರ ಟಿವಿಸಿಸಿ ರವರಿಂದ ಮುಖ್ಯ ಲೆಕ್ಕಾಧಿಕಾರಿ ರವರಿಗೆ ಪಾವತಿಗೆ ಸಲ್ಲಿಸಿದ್ದು, ದಾಖಲೆಗಳು ಅಪ್‌ಲೋಡ್ ಆಗಿರುವುದಿಲ್ಲ ಎಂದು ಕಛೇರಿಗೆ ಹಿಂದುರುಗಿಸಿರುತ್ತಾರೆ. ವಿಭಾಗ ಕಛೇರಿಯಿಂದ ಟಿವಿಸಿಸಿ ರವರಿಗೆ ಸಲ್ಲಿಸುವಾಗ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಆಗಿರುವುದು ಖಚಿತಪಡಿಸಿಕೊಂಡ ನಂತರವೇ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ. ಅಲ್ಲದೇ ಟಿವಿಸಿಸಿ ರವರು ಸಹ ದಾಖಲೆಗಳು ಇರುವುದು ಖಚಿತಪಡಿಸಿದ ನಂತರ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ.

ಮುಂದುವರೆದಂತೆ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ಉದ್ದೇಶ ಪೂರ್ವಕವಾಗಿ ದಾಖಲೆಗಳು ಡೀಲೀಟ್ ಮಾಡಿ ಬಿಲ್ ಪಾವತಿಯನ್ನು ತಡೆ ಹಿಡುಯುತ್ತಿರುವುದಾಗಿ ಆರೋಪಿಸಿ, ಗುತ್ತಿಗೆದಾರರು ಕಾರ್ಯಪಾಲಕ ಅಭಿಯಂತರರು ಕಛೇರಿಗೆ ಲೀಗಲ್ ನೋಟಿಸ್ ನೀಡಿರುತ್ತಾರೆ. ಇದರಿಂದ ದಾಖಲೆಗಳು ಕಣ್ಮರೆಯಾಗಿರುವ ಬಗ್ಗೆ ವಲ್ಲಭ ಸಾಫ್ಟ್‌ವೇರ್ ರವರಿಗೆ ವಿವರಣೆ ಕೋರಿದ್ದು, ಐಎಫ್‌ಎಸ್ 030 (EE Portal) ರಲ್ಲಿ ಡಿಲೀಟ್ ಆಗಿರುವುದಾಗಿ ತಿಳಿಸಿರುತ್ತಾರೆ. ಈ ವಿಷಯವಾಗಿ ತಮ್ಮ ಹೇಳಿಕೆಯನ್ನು 3 ದಿನಗೊಳಗಾಗಿ ನೀಡಲು ಈ ಮೂಲಕ ಕೋರಿದೆ.

ಕಾರ್ಯಪಾಲಕ ಅಭಿಯಂತರರು
ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು

1. ಜಂಟಿ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.